## ಅಧ್ಯಾಯ 5 ಅಭ್ಯಾಸದ ಹಾಳೆ

# ಕ್ರಿಸ್ತನ ಸಭೆಯ ಬಗ್ಗೆ ಬೈಬಲ್ ಏನು ಹೇಳುತ್ತದೆ?

I. ಕ್ರಿಸ್ತನ ಸಭೆಯು ಯಾರನ್ನು ಒಳಗೊಂಡಿದೆ?

1. ಸೌಲನು ________________ ಹಾಳು ಮಾಡುತ್ತಿದ್ದನು. ಅಪೊಸ್ತಲರ ಕೃತ್ಯಗಳು 8:3
2. ಇದು __________ ಹಿಂಸಿಸುವುದಾಗಿತ್ತು. ಅಪೊಸ್ತಲರ ಕೃತ್ಯಗಳು 9:1
3. ಇವರಿಗೆ _________________ ಎಂಬ ಹೆಸರು ಬಂತು. ಅಪೊಸ್ತಲರ ಕೃತ್ಯಗಳು 11:26
4. ಸಭೆಯು ____________________ ಎಂದೂ ಸಹ ತಿಳಿಯಲ್ಪಟ್ಟಿದೆ. ಎಫೆಸ 1:22, 23

II. ಎಷ್ಟು ದೇಹಗಳು?

______________________________ ರೋಮಾಪುರ 12:4, 5
______________________________ 1 ಕೊರಿಂಥ 12:12
______________________________ 1 ಕೊರಿಂಥ 12:20
______________________________ ಎಫೆಸ 4:4
______________________________ ಕೊಲೊಸ್ಸೆ 3:15

III. ಅದು ಯಾರ ಸಭೆ (ದೇಹ)?

______________________________ ಮತ್ತಾಯ 16:18
______________________________ 1 ಕೊರಿಂಥ 12:27
______________________________ ಎಫೆಸ 1:22, 23
______________________________ ಎಫೆಸ 5:30
______________________________ ಕೊಲೊಸ್ಸೆ 1:24

IV. ಕ್ರಿಸ್ತನು ಸಭೆಗೆ ಏನಾಗಿದ್ದಾನೆ?

______________________________ ಮತ್ತಾಯ 16:18
______________________________ 1 ಕೊರಿಂಥ 3:11
______________________________ ಎಫೆಸ 1:22
______________________________ ಎಫೆಸ 5:23

V. ಕ್ರಿಸ್ತನು ಸಭೆಗಾಗಿ ಏನು ಮಾಡಿದ್ದಾನೆ?

_________________ ಯಾಕೆ? _________________ ಎಫೆಸ 5:25
_____________________________ ಅಪೊಸ್ತಲರ ಕೃತ್ಯಗಳು 20:28


VI. ಸಭೆಯು ______________________ ಗೆ ಅಧೀನವಾಗಿದೆ. ಎಫೆಸ 5:24

VII. ಕ್ರಿಸ್ತನ ಸದಸ್ಯರಲ್ಲಿ ಯಾವ ರೀತಿಯ ಸಾಮರಸ್ಯವನ್ನು ಬಯಸುತ್ತಾನೆ?

1. ನಾವು ________________ ಅವರೂ ________________ ಬೇಕು. ಯೋಹಾನ 17:22
2. ನಿಮ್ಮೆಲ್ಲರ ಮಾತು ________________ ಆಗಿರಬೇಕು, ನಿಮ್ಮಲ್ಲಿ ________________ ಇರಬಾರದು. 1 ಕೊರಿಂಥ 1:10
3. ________________ ಗೋಸ್ಕರ ________________ ಹೋರಾಡುವರಾಗಿದ್ದೀರಿ. ಫಿಲಿಪ್ಪಿ 1:27

VIII. ಯೇಸುವು ಸಭೆಯನ್ನು ________________ ತನ್ನನ್ನು ಒಪ್ಪಿಸಿಕೊಟ್ಟನು ಮತ್ತು ತನ್ನೆದುರಿನಲ್ಲಿ ________________ ವಾಕ್ಯೋಪದೇಶ ಸಹಿತವಾದ ಜಲಸ್ನಾನ ಮಾಡಿಸಿ, ________________ ಮಾಡಿದನು. ಎಫೆಸ 5:26, 27

Copyright 1965 - Gospel Light Pub. Co., Delight, AR 71940



**ಅಧ್ಯಯನ ಪ್ರಶ್ನಾವಳಿಯನ್ನು ಪ್ರಸ್ತುತ ಪಡಿಸುವುದು:**

**5**

# "ಕ್ರಿಸ್ತನ ಸಭೆಯ ಬಗ್ಗೆ ಬೈಬಲ್ ಏನು ಹೇಳುತ್ತದೆ?"

"ಕ್ರಿಸ್ತನ ಸಭೆಯ ಬಗ್ಗೆ ಬೈಬಲ್ ಏನು ಹೇಳುತ್ತದೆ" ಎಂಬ ಈ ಅಧ್ಯಯನವನ್ನು "ಯೇಸುವು ಮಾರ್ಗ" ಇಲ್ಲವೇ "ರಕ್ಷಣೆಯ" ಅಧ್ಯಯನ ಪ್ರಶ್ನಾವಳಿಗಳ ನಂತರ ಪ್ರಸ್ತುತಪಡಿಸಲ್ಪಡಬೇಕು. ಹೀಗಿದ್ದರೂ ಈ ಅಧ್ಯಯನವನ್ನು "ರಕ್ಷಣೆಯ" ಅಧ್ಯಯನ ಪ್ರಶ್ನಾವಳಿಯ ನಂತರ ಪ್ರಸ್ತುತಪಡಿಸಲ್ಪಡಬೇಕು. ಇದು ಸತ್ಯವಾಗಿರುವುದು, ಯಾಕಂದರೆ "ರಕ್ಷಣೆಯ" ಅಧ್ಯಯನ ಪ್ರಶ್ನಾವಳಿ ಮುಗಿಯುವಲ್ಲಿ ಇದು ತೆಗೆದು ಕೊಳ್ಳಲ್ಪಡುತ್ತದೆ.

**ಉದ್ದೇಶ**

"ಸಭೆ" ಪ್ರಶ್ನಾವಳಿಯ ಉದ್ದೇಶವು, ರಕ್ಷಿಸಲ್ಪಟ್ಟವರು ಒಂದು ದೇಹದಲ್ಲಿ, ಕ್ರಿಸ್ತನ ಸಭೆಯಲ್ಲಿ ಇರುವರು, ಅದು ಮಾನವ ಸಂಸ್ಥೆ, ಸಂಘಟನೆ *ಇಲ್ಲವೇ* ಸಭಾಪಂಗಡ ವಾಗಿರುವದಿಲ್ಲ. ಕ್ರಿಸ್ತನ ಒಂದು ದೇಹದಲ್ಲಿ ಇರುವ ಎಲ್ಲರೂ ಆ ಒಂದು ದೇಹದ ಐಕ್ಯತೆಗಾಗಿ ಕೆಲಸ ಮಾಡಬೇಕಾಗಿರುವುದು.

**ಸಂಕ್ಷಿಪ್ತದಲ್ಲಿ ಪಾಠ**

ಈ ಅಧ್ಯಯನ ಪ್ರಶ್ನಾವಳಿಯು - ಕ್ರಿಸ್ತನ ಅನುಯಾಯಿಗಳು, ಕ್ರೈಸ್ತರು, ಸಭೆಯಾಗಿರುವರು, ಕ್ರಿಸ್ತನ ದೇಹವಾಗಿರುವರು. ಯೇಸುವು ಒಂದೇ ಒಂದು ದೇಹವನ್ನು ಕಟ್ಟಿದನು, ಅದು ಆತನು ಶಿರಸ್ಸು, ಅಸ್ತಿವಾರ ಮತ್ತು ರಕ್ಷಕನು ಆಗಿರುವ ಸಭೆಯಾಗಿರುವುದು. ಆತನು ಸಭೆಯನ್ನು ತನ್ನ ರಕ್ತದಿಂದ ಕೊಂಡುಕೊಳ್ಳುವಂತೆ ಮತ್ತು ಅದನ್ನು ತನಗೆ ಒಪ್ಪಿಸಿಕೊಡುವಂತೆ, ಆತನ ಪ್ರೀತಿಯು ಆತನನ್ನು ಸಾಯುವದಕ್ಕೆ ನಡಿಸಿತು. ಆತನು ತನ್ನ ಸಭೆಯಲ್ಲಿ ಇರುವ ಎಲ್ಲರೂ ಒಂದಾಗಿರಬೇಕು ಎಂದು ಬಯಸುತ್ತಾನೆ - ಎಂದು ಬೋಧಿಸುತ್ತದೆ.

**ಪೀಠಿಕೆ**

ಈ ಪಾಠವು, "ರಕ್ಷಣೆಯ" ಅಧ್ಯಯನ ಪ್ರಶ್ನಾವಳಿಯನ್ನು ಸಂಕ್ಷೇಪವಾಗಿ ಪುನರಾವ ಲೋಕಿಸುವದರಿಂದ ಪರಿಚಯಿಸಲ್ಪಡಬೇಕು ಮತ್ತು ಅನಂತರ ರಕ್ಷಿಸಲ್ಪಟ್ಟವರು ಸಭೆಯಲ್ಲಿ ಇರುವರೆಂದು ತೋರಿಸಬೇಕು. "ರಕ್ಷಣೆಯ" ಅಧ್ಯಯನ ಪ್ರಶ್ನಾವಳಿಯು ಒಬ್ಬನು ರಕ್ಷಿಸಲ್ಪಡಬೇಕಾದರೆ ಏನು ಮಾಡಬೇಕು ಮತ್ತು ಜನರು ಯೇಸುವಿನ ದೇಹದ ಸದಸ್ಯರು ಹೇಗಾಗುವರು ಎಂಬುದನ್ನು ಮುಂದಿಡುವುದು. ಕ್ರಿಸ್ತನ ಸಭೆಯ ಬಗ್ಗೆ

ಬೈಬಲ್ ಏನು ಹೇಳುತ್ತದೆ ಎಂಬುದನ್ನು ತಿಳಿಯಲು ಈ ಪಾಠವು ಒಬ್ಬನಿಗೆ ಸಹಾಯ ಮಾಡಬಲ್ಲದು.

## I. ಸಭೆಯ ಸದಸ್ಯರು

ಈ ಭಾಗದಲ್ಲಿ ಕ್ರಿಸ್ತನ ಸಭೆಯ ಬಗ್ಗೆ, ಅವರು ಯಾರು, ಮತ್ತು ಅವರು ಏನೆಂದು ಕರೆಯಲ್ಪಟ್ಟಿದ್ದಾರೆ ಎಂಬುದರ ಬಗ್ಗೆ ಅಧ್ಯಯನ ಮಾಡುವೆವು.

1. ಕ್ರಿಸ್ತನ ಸಭೆಯನ್ನು ಯಾರು ಮಾಡುವರು? [ಓದಿರಿ ಅಪೊಸ್ತಲರ ಕೃತ್ಯಗಳು 8:3.] ಸೌಲನು *ಯಾರನ್ನು* ಹಿಂಸಿಸಿದನು? [ಖಾಲಿಯಿಟ್ಟ ಸ್ಥಳದಲ್ಲಿ "ಸಭೆ" ಎಂದು ತುಂಬಿರಿ.] ಸೌಲನು ಸಭೆಯನ್ನು ನಾಶಪಡಿಸಲು ಹುಡುಕುತ್ತಿರುವಾಗ, ಅವನು ಕಟ್ಟಡಗಳನ್ನು ಒಡೆದು ಹಾಕುತ್ತಿರಲಿಲ್ಲ. ಕ್ರಿಸ್ತನ ಸಭೆಯು ಒಂದು ಕಟ್ಟಡವಾಗಲೀ ಇಲ್ಲವೇ ಕಟ್ಟಡಗಳಾಗಲೀ ಇಲ್ಲವೇ ಒಂದು ಅಧಿಕಾರಿಗಳ ಸಂಘಟನೆಯಾಗಲೀ ಆಗಿರುವದಿಲ್ಲ, ಆದರೆ ಅದು ಕ್ರಿಸ್ತನಿಗೆ ಒಳಪಟ್ಟ ಪುರುಷರು ಮತ್ತು ಸ್ತ್ರೀಯರು ಆಗಿರುವುದು. [*ಹಿಂಬದಿಯಲ್ಲಿ* ಒಂದು ಚೌಕೋನ ರಚಿಸಿರಿ, ಮತ್ತು ಅದರೊಳಗೆ ಮೇಲೆ "ಸಭೆ" ಎಂದು ಬರೆಯಿರಿ. ಕೆಳಗೆ "ಸದಸ್ಯರು" ಎಂದು ಬರೆಯಿರಿ. ಅದರ ಮೇಲೆ "ಪುರುಷರು ಮತ್ತು ಸ್ತ್ರೀಯರು" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.]

2. ಸೌಲನು ಸಭೆಯನ್ನು ನಾಶಪಡಿಸಲು ಹುಡುಕುತ್ತಿದ್ದಾಗ, ಅವನು ಯಾರನ್ನು ನಾಶಪಡಿಸಲು ಹುಡುಕುತ್ತಿದ್ದನು? ಅಪೊಸ್ತಲರ ಕೃತ್ಯಗಳು 8:3ರ ವರೆಗಿನ ಸೌಲನ ಚಟುವಟಿಕೆಯನ್ನು ಲೂಕನು ಚರ್ಚಿಸುವದನ್ನು ಆ ಮೇಲೆ ಫಿಲಿಪ್ಪನ ಚಟುವಟಿಕೆಗಳನ್ನು ಚರ್ಚಿಸಲು ಪ್ರಾರಂಭಿಸುವದನ್ನು ಗಮನಿಸಿರಿ (ಅಪೊಸ್ತಲರ ಕೃತ್ಯಗಳು 8:5). ಅಪೊಸ್ತಲರ ಕೃತ್ಯಗಳು 9:1ರಲ್ಲಿ ಸೌಲನ ಬಗ್ಗೆ ತನ್ನ ಚರ್ಚೆಯನ್ನು ಬಿಟ್ಟಲ್ಲಿಂದ ತೆಗೆದುಕೊಂಡು ಸೌಲನ ಚಟುವಟಿಕೆಯನ್ನು ಅವನು ಪುನಃ ಚರ್ಚಿಸಲು ಪ್ರಾರಂಭಿಸುತ್ತಾನೆ. ಅಪೊಸ್ತಲರ ಕೃತ್ಯಗಳು 8:3ರಲ್ಲಿ ಸೌಲನ ಬಗ್ಗೆ ಬರೆಯುವದನ್ನು ಬಿಟ್ಟಾಗ, ಸೌಲನು ಸಭೆಯನ್ನು ಅಳಿಸಿಬಿಡಲು ಹುಡುಕುತ್ತಿದ್ದನು. ಲೂಕನು ಪುನಃ ಸೌಲನ ವೃತ್ತಾಂತವನ್ನು ತೆಗೆದುಕೊಳ್ಳುವಾಗ, ಸೌಲನು ತಾನು ಮಾಡುತ್ತಿದ್ದನ್ನು ಇನ್ನೂ ಮಾಡುತ್ತಿದ್ದನು. ನಾಶಮಾಡಲು ಹುಡುಕುತ್ತಿದ್ದ ಸೌಲನು ಯಾರು? [ಓದಿರಿ ಅಪೊಸ್ತಲರ ಕೃತ್ಯಗಳು 9:1.] ಸಭೆಯ ಸದಸ್ಯರು *ಏನೆಂದು* ಕರೆಯಲ್ಪಟ್ಟರು? [ಖಾಲಿಯಾದ ಸ್ಥಳದಲ್ಲಿ "ಕರ್ತನ ಶಿಷ್ಯರು" ಎಂದು ತುಂಬಿರಿ. *ಹಿಂಬದಿಯಲ್ಲಿ* "ಪುರುಷರು ಮತ್ತು ಸ್ತ್ರೀಯರು" ಎಂಬುದರ ಮೇಲೆ "ಶಿಷ್ಯರು" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.]

[ಈ ಸಮಯದಲ್ಲಿ ಶಿಕ್ಷಕನು, ಒಬ್ಬ *ಶಿಷ್ಯನ* ಮತ್ತು ಒಬ್ಬ *ಅಪೊಸ್ತಲನ* ಮಧ್ಯದಲ್ಲಿಯ ಭಿನ್ನತೆಯನ್ನು ವಿವರಿಸಲು ಬಯಸಬಹುದು. ಇದಕ್ಕೆ ಕಾರಣವು ಶಿಷ್ಯರು ಹನ್ನೆರಡು ಜನರಾಗಿದ್ದರು ಎಂದು ಅನೇಕರು ಯೋಚಿಸುತ್ತಾರೆ. ಲೂಕ 6:12-14, ಯೇಸುವಿನ ಹಿಂಬಾಲಕರ, ಆತನ ಶಿಷ್ಯರ ದೊಡ್ಡ ಗುಂಪಿನೊಳಗಿಂದ *ಹನ್ನೆರಡು ಜನ ಅಪೊಸ್ತಲರು* ಆಯ್ದುಕೊಳ್ಳಲ್ಪಟ್ಟರು ಎಂಬುದನ್ನು ವಿವರಿಸಲು ಸಹಾಯ ಮಾಡುತ್ತದೆ. *ಅಪೊಸ್ತಲರು* ಸಣ್ಣಗುಂಪಾಗಿದ್ದರು, ಹನ್ನೆರಡು ಜನರಿದ್ದರು, ಆತನ ವಿಶೇಷ ಪ್ರತಿನಿಧಿಗಳಾಗಿ ಆಯ್ಕೆ ಮಾಡಿಕೊಳ್ಳಲ್ಪಟ್ಟಿದ್ದರು, ಮತ್ತು *ಶಿಷ್ಯರು* ಆತನ *ಎಲ್ಲಾ* ಹಿಂಬಾಲಕರಾಗಿದ್ದರು.]

3. ಸಭೆಯ ಸದಸ್ಯರು ಕರ್ತನ *ಶಿಷ್ಯರಾಗಿದ್ದರು,* ಆದರೆ ಶಿಷ್ಯರು ಏನೆಂದು ಕರೆಯಲ್ಪಟ್ಟರು? [ಓದಿರಿ ಅಪೊಸ್ತಲರ ಕೃತ್ಯಗಳು 11:26.] ಶಿಷ್ಯರು, ಸಭೆಯ ಸದಸ್ಯರು *ಏನೆಂದು* ಸಹ ಕರೆಯಲ್ಪಟ್ಟರು? ["ಕ್ರೈಸ್ತರು" ಎಂದು ಖಾಲಿಯಾದ ಸ್ಥಳದಲ್ಲಿ ತುಂಬಿರಿ. *ಹಿಂದಿನ* ಪುಟದಲ್ಲಿ "ಶಿಷ್ಯರು" ಎಂಬುದರ ಮೇಲೆ "ಕ್ರೈಸ್ತರು" ಎಂದು ಬರೆಯಿರಿ. ಪುಟ

166ನ್ನು ನೋಡಿರಿ.]

4. "ಶಿಷ್ಯರು" ಮತ್ತು "ಕ್ರೈಸ್ತರು" ಎಂಬ ಮಾತುಗಳು ಸಭೆಯ ವೈಯಕ್ತಿಕ ಸದಸ್ಯರಿಗೆ ಅನ್ವಯಿಸುತ್ತದೆ. ಈ ಸದಸ್ಯರು ಒಂದು ಗುಂಪಿನಂತೆ ಅಂದರೆ ಇಡೀಯಾಗಿ, ಸಭೆ ಎಂದು ಕರೆಯಲ್ಪಟ್ಟರು. ಈ ಜನರ ಗುಂಪನ್ನು ವಿವರಿಸಲು ಉಪಯೋಗಿಸಿದ ಇನ್ನೊಂದು ಮಾತು ಇರುತ್ತದೆ. [ಓದಿರಿ ಎಫೆಸ 1:22, 23.] ಸಭೆಯು ಬೇರೆ *ಏನೆಂದು* ಕರೆಯಲ್ಪಟ್ಟಿದೆ? [ಖಾಲಿಯಾದ ಸ್ಥಳದಲ್ಲಿ "ದೇಹ" ಎಂದು ತುಂಬಿರಿ. *ಹಿಂದಿನ* ಪುಟದಲ್ಲಿ "ಸಭೆಯ" ಕೆಳಗಿನ ಚೌಕದಲ್ಲಿ "ದೇಹ" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.] ಸಭೆಯು ದೇಹವಾಗಿದ್ದರೆ, ದೇಹವು ಮತ್ತು ಸಭೆಯಾಗಿದ್ದರೆ, ಆಗ ಸಭೆಯನ್ನು ಕುರಿತಾಗಿ ಸತ್ಯವಾದದ್ದು ದೇಹವನ್ನು ಕುರಿತಾಗಿ ಸತ್ಯವಾಗಿರುತ್ತದೆ ಹಾಗೂ ದೇಹವನ್ನು ಕುರಿತಾಗಿ ಸತ್ಯವಾದದ್ದು ಸಭೆಯನ್ನು ಕುರಿತು ಸತ್ಯವಾಗಿರುತ್ತದೆ, ಮತ್ತು ದೇಹದ ಬಗ್ಗೆ ಹೇಳಲ್ಪಟ್ಟದ್ದು ಸಭೆಯ ಬಗೆಗೂ ಹೇಳಲ್ಪಡಬಹುದು.

ಈ ಭಾಗದಲ್ಲಿ ನಾವು ಯಾವುದನ್ನು ಕಲಿತುಕೊಂಡಿದ್ದೇವೆ? "ಸಭೆ" ಮತ್ತು "ದೇಹ" ಎಂಬ ಪದಗಳು ಕ್ರಿಸ್ತನ ಅನುಯಾಯಿಗಳನ್ನು ಒಂದು ಗುಂಪಿನಂತೆ ಉಲ್ಲೇಖಿಸಲು ಉಪಯೋಗಿಸಲ್ಪಟ್ಟಿವೆ ಎಂಬುದನ್ನು ಕಲಿತುಕೊಂಡಿದ್ದೇವೆ. "ಶಿಷ್ಯರು" ಮತ್ತು "ಕ್ರೈಸ್ತರು" ಎಂಬ ಮಾತುಗಳು ವೈಯಕ್ತಿಕ ಸದಸ್ಯರ ಬಗ್ಗೆ ಉಪಯೋಗಿಸಲ್ಪಟ್ಟಿವೆ. ಕ್ರೈಸ್ತರು ಕ್ರಿಸ್ತನ (ಸಭೆಯನ್ನು) ದೇಹವನ್ನು ರೂಪಿಸುವವರಾಗಿದ್ದಾರೆ.

## II. ಎಷ್ಟು?

ಕ್ರೈಸ್ತರು ಅನೇಕ ಧಾರ್ಮಿಕ ಸಂಘಟನೆಗಳನ್ನು ರೂಪಿಸಿದರೆಂದು ಬೈಬಲ್ ಬೋಧಿಸುತ್ತದೆಯೋ? ಕ್ರೈಸ್ತರು ಎಷ್ಟು ಗುಂಪುಗಳ ಸದಸ್ಯರಾಗಿರುವರು. [ಓದಿರಿ ರೋಮಾಪುರ 12:4, 5.] ಕ್ರೈಸ್ತರು *ಎಷ್ಟು* ದೇಹಗಳ ಸದಸ್ಯರಾಗಿರುವರು? [ಖಾಲಿಯಾದ ಸ್ಥಳದಲ್ಲಿ "ಒಂದು" ಎಂದು ತುಂಬಿರಿ.] ಕ್ರಿಸ್ತನಲ್ಲಿ "ಒಂದು" ದೇಹ ಇರುವದೆಂದು ಬೈಬಲ್ ಹೇಳುವದನ್ನು ಗಮನಿಸಿರಿ. "ರಕ್ಷಣೆ" ಅಧ್ಯಯನ ಪ್ರಶ್ನಾವಳಿಯಲ್ಲಿ "ಎಲ್ಲಾ ಆತ್ಮಿಕ ಆಶೀರ್ವಾದಗಳು" ಕ್ರಿಸ್ತನಲ್ಲಿ ಇವೆಯೆಂದು ನಾವು ಕಲಿತುಕೊಂಡಿದ್ದೇವೆ. ಇದು ಸತ್ಯವಾಗಿರುವದರಿಂದ, ಕ್ರಿಸ್ತನಲ್ಲಿರುವ ಆತ್ಮಿಕ ಆಶೀರ್ವಾದಗಳು *ಒಂದು ದೇಹಕ್ಕೆ* ಇರುವವೆಂದಾಗುತ್ತದೆ. ದೇಹದ ಬಗ್ಗೆ ಸತ್ಯವಾಗಿರುವಂಥದ್ದು *ಸಭೆಯನ್ನು* ಕುರಿತು ಸಹ ಸತ್ಯವಾಗಿರುತ್ತದೆ. ಆದುದರಿಂದ, ಕ್ರಿಸ್ತನಲ್ಲಿರುವ ಆತ್ಮಿಕ ಆಶೀರ್ವಾದಗಳು *ಒಂದು* ಸಭೆಗೆ ಇರುತ್ತವೆಂದಾಗುತ್ತದೆ.

ಬೈಬಲಿನಲ್ಲಿ ದೇಹವು ಅನೇಕ ಸಲ ಹೇಳಲ್ಪಟ್ಟಿರುತ್ತದೆ. ದೇಹಗಳ ಸಂಖ್ಯೆಯನ್ನು ಕುರಿತು ಬೈಬಲ್ ಹೊಂದಾಣಿಕೆಯಲ್ಲಿರುವುದೋ? [ಓದರಿ 1 ಕೊರಿಂಥ 12:12, 20; ಎಫೆಸ 4:4; ಕೊಲೊಸ್ಸೆ 3:15.] *ಎಷ್ಟು* ದೇಹಗಳು ಇರುವವು? [ಖಾಲಿಯಾದ ಸ್ಥಳದಲ್ಲಿ "ಒಂದು" ಎಂದು ಬರೆಯಿರಿ.] ಈ ವಿಷಯದಲ್ಲಿ ಬೈಬಲು ಸ್ಥಿರವಾಗಿರುವುದೋ? ಒಂದೇ ದೇಹವಿರುವುದು ಎಂಬುದನ್ನು ಇದು ಒತ್ತಿ ಹೇಳುವುದಿಲ್ಲವೋ? [*ಹಿಂಬದಿ* ಪುಟದಲ್ಲಿ ಚೌಕೋನದಲ್ಲಿ "ಒಂದು" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? *ಒಂದೇ* ನಿಜವಾದ ದೇಹವು, ಒಂದೇ ನಿಜವಾದ ಸಭೆಯು, ಬೈಬಲಿನಲ್ಲಿ ನಮೂದಿಸಲ್ಪಟ್ಟಿರುವುದೆಂದು ಕಲಿತುಕೊಂಡಿದ್ದೇವೆ.

**III. ಯಾರ ಸಭೆ?**

ಈ ಭಾಗದಲ್ಲಿ ಕ್ರೈಸ್ತರ ಈ ದೇಹವು, ಸಭೆಯು ಯಾರಿಗೆ ಒಳಪಟ್ಟಿದೆ ಎಂಬುದನ್ನು ನಿರ್ಧರಿಸಲು ಪ್ರಯತ್ನಿಸುತ್ತೇವೆ.

ಯೇಸುವು ಒಂದು ಸಭೆಯನ್ನು ಕಟ್ಟುವೆನು ಎಂದು ವಾಗ್ದಾನ ಮಾಡಿದನು. ಯಾರ ಸಭೆಯನ್ನು ಅವನು ಕಟ್ಟಲಿಕ್ಕಿದ್ದನು? [ಓದಿರಿ ಮತ್ತಾಯ 16:18.] *ಯಾರ* ಸಭೆಯನ್ನು ತಾನು ಕಟ್ಟುವೆನೆಂದು ಯೇಸು ಹೇಳಿದನು? [ಖಾಲಿಯಾದ ಸ್ಥಳದಲ್ಲಿ "ನನ್ನ," ಎಂದು ತುಂಬಿರಿ ಮತ್ತು ಅನಂತರ ಆವರಣಗಳಲ್ಲಿ "ಕ್ರಿಸ್ತನ" ಎಂದು ಬರೆಯಿರಿ.]

ಈ ದೇಹವು, ಸಭೆಯು, ಅನಂತರದಲ್ಲಿ ಪೌಲನಿಂದ ಉಲ್ಲೇಖಿಸಲ್ಪಟ್ಟಿದೆ. ಪೌಲನು ಅದನ್ನು ಹೇಗೆ ಉಲ್ಲೇಖಿಸಿದನು? [ಓದಿರಿ 1 ಕೊರಿಂಥ 12:27.] ಅದು *ಯಾರ* ದೇಹವೆಂದು ಪೌಲನು ಕರೆದನು? [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತನ" ಎಂದು ತುಂಬಿರಿ. ಪುಟ 166ನ್ನು ನೋಡಿರಿ.]

ಅದೇ ಅರ್ಥದಿಂದ, ದೇಹದ ಬಗ್ಗೆ ಪೌಲನು ಮತ್ತೇನನ್ನು ಹೇಳಿದನು. ದೇಹವು ಇದೆಯೆಂದು *ಯಾರ* ದೇಹದ ಬಗ್ಗೆ ಹೇಳಿದನು? [ಓದಿರಿ ಎಫೆಸ 1:22, 23; 5:30; ಕೊಲೊಸ್ಸೆ 1:24.] *ಯಾರ* ದೇಹವನ್ನು ಒಂದೇ ದೇಹ ಎಂದು ಪೌಲನು ಕರೆಯುತ್ತಾನೆ? [ಖಾಲಿಯಾದ ಸ್ಥಳದಲ್ಲಿ "ಆತನ" ಎಂಬುದರ ನಂತರ "ಕ್ರಿಸ್ತನ" ಎಂದು ಆವರಣಗಳಲ್ಲಿ ತುಂಬಿರಿ. *ಹಿಂಬದಿಯಲ್ಲಿ* "ಸಭೆ" ಮತ್ತು "ದೇಹದ" ಹಿಂದೆ "ಕ್ರಿಸ್ತನ" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಯೇಸುವಿಗೆ ಒಂದೇ ದೇಹವಿರುವುದು, ಒಂದೇ ಸಭೆಯಿರುವುದು ಎಂಬುದನ್ನು ಕಲಿತುಕೊಂಡಿದ್ದೇವೆ. ಈ ದೇಹವು ಎಲ್ಲಾ ಕ್ರೈಸ್ತರಿಂದ ಮಾಡಲ್ಪಟ್ಟಿದೆ.

[ಈ ಸಮಯದಲ್ಲಿ ಶಿಕ್ಷಕನು ಅಧ್ಯಯನ ಪ್ರಶ್ನಾವಳಿಯ ಹಿಂಬದಿಗೆ ತಿರುಗಿಸಿ, ಒಂದು ಸಭೆಯಲ್ಲಿ ಒಂದು ದೇಹದಲ್ಲಿ ಒಬ್ಬನು ಹೇಗೆ ಪ್ರವೇಶಿಸುತ್ತಾನೆ ಎಂದು ಕೇಳಲು ಬಯಸುವನು. *ಹಿಂಬದಿಯಲ್ಲಿ* "ಜಗತ್ತಿನಿಂದ" "ಸಭೆಯ" ಒಳಗೆ ಒಂದು ಬಾಣ ಗುರುತಿಸಿರಿ. ಪುಟ 166ನ್ನು ನೋಡಿರಿ.] ಒಬ್ಬನು ಸಭೆಯನ್ನು ಹೇಗೆ ಪ್ರವೇಶಿಸುವನು? ಕ್ರಿಸ್ತನೊಳಗೆ ಸೇರ ಬೇಕಾದರೆ ಒಬ್ಬನು ಏನು ಮಾಡಬೇಕೆಂದು "ರಕ್ಷಣೆಯ" ಅಧ್ಯಯನದಲ್ಲಿ ನಾವು ಏನನ್ನು ಕಲಿತುಕೊಂಡೆವು? ನಾವು ಕೇಳಬೇಕು ಮತ್ತು ಕಲಿಯ ಬೇಕು, ಆತನಲ್ಲಿ ನಂಬಿಕೆ ಇಡಬೇಕು, ನಮ್ಮ ಪಾಪಗಳಿಗಾಗಿ ಮಾನಸಾಂತರ ಪಡಬೇಕು, ಮತ್ತು ಆತನಲ್ಲಿ ನಮ್ಮ ನಂಬಿಕೆಯನ್ನು ಅರಿಕೆ ಮಾಡಬೇಕು ಎಂದು ಯೇಸು ಬೋಧಿಸಿದನು. ನಾವು ಇದನ್ನು ಮಾಡಿದರೆ ಮತ್ತು ಬೈಬಲಿನ ಒಂದೇ ಬಾಪ್ತಿಸ್ಮವನ್ನು ಸ್ವೀಕರಿಸಿಕೊಂಡರೆ, ನಾವು ಯೇಸುವಿನಲ್ಲಿ ಪ್ರವೇಶಿಸುವೆವು (ಗಲಾತ್ಯ 3:27). ಯೇಸುವಿನಲ್ಲಿ ಒಂದೇ ದೇಹವಿರುವುದು, ಹೀಗೆ ಯೇಸುವಿನೊಳಗೆ ನಾವು ಬಾಪ್ತಿಸ್ಮ ಮಾಡಿಸಿಕೊಳ್ಳುವಾಗ, ಯೇಸುವಿನಲ್ಲಿರುವ ಒಂದೇ ದೇಹವನ್ನು ಪ್ರವೇಶಿಸುವೆವು ಎಂಬುದು ಸ್ಪಷ್ಟವಾಗುವುದು. ಹೀಗಿದ್ದರೂ ನಾವು ಒಂದೇ ದೇಹವನ್ನು ಹೇಗೆ ಪ್ರವೇಶಿಸುವೆವು ಎಂಬುದರ ಬಗ್ಗೆ ತೀರ್ಮಾನಿಸಲಿಕ್ಕೆ ತರ್ಕಬದ್ಧವಾದ ಕಾರಣಗಳನ್ನು ಉಪಯೋಗಿಸಬೇಕಾಗಿಲ್ಲ. ನಾವು ಒಂದು ದೇಹವನ್ನು ಪ್ರವೇಶಿಸುವುದು ಯಾವಾಗ ಎಂಬುದನ್ನು ಬೈಬಲ್ ಹೇಳುತ್ತದೆ. [ಓದಿರಿ 1 ಕೊರಿಂಥ 12:13.] ಒಂದೇ ದೇಹವನ್ನು ನಾವು ಯಾವಾಗ ಪ್ರವೇಶಿಸುವೆವು? [*ಹಿಂಬದಿಯಲ್ಲಿ* ಬಾಣದಲ್ಲಿ ನಮ್ಮನ್ನು ಒಂದೇ ದೇಹದೊಳಗೆ ಇಡುವ ಸಂಗತಿಗಳನ್ನು ಬರೆಯಿರಿ. ಪುಟ 166ನ್ನು ನೋಡಿರಿ.]

ಒಂದೇ ದೇಹದಲ್ಲಿ ನಾವು ಇದ್ದರೆ ನಾವು ಏನೆಂದು ಕರೆಯಲ್ಪಡುತ್ತೇವೆ? ಒಂದು

ಗುಂಪಾಗಿ ನಾವು *ದೇಹ* ಅಂದರೆ ಕ್ರಿಸ್ತನ ಸಭೆ ಎಂದು ಕರೆಯಲ್ಪಟ್ಟಿದ್ದೇವೆ. ವ್ಯಕ್ತಿಗಳಾಗಿ ನಾವು ಕರ್ತನ ಶಿಷ್ಯರು, ಅಂದರೆ *ಕ್ರೈಸ್ತರು* ಆಗಿರುತ್ತೇವೆ.

## IV. ಕ್ರಿಸ್ತ ಮತ್ತು ಸಭೆ

ಸಭೆಯೊಂದಿಗೆ ಯೇಸುವಿನ ಅದ್ವಿತೀಯವಾದ ಸಂಬಂಧವಿರುವುದು. ಬೇರೆ ಯಾರೂ ಅಂಥ ಸಂಬಂಧವನ್ನು ಕಾಯ್ದುಕೊಳ್ಳಲಾರನು.

ಸಭೆಯು ಯಾವಾಗಲೂ ಭೂಲೋಕದಲ್ಲಿರಲಿಲ್ಲ, ಆದುದರಿಂದ ಅದಕ್ಕೆ ಒಂದು ಪ್ರಾರಂಭವಿರತಕ್ಕದ್ದು ಮತ್ತು ಅದನ್ನು ಪ್ರಾರಂಭಿಸಿದಾತನು ಇರತಕ್ಕದ್ದು. ಯೇಸುವು ತಾನು ಏನು ಏನು ಮಾಡುವೆನೆಂದು ಹೇಳಿದನು? [ಓದಿರಿ ಮತ್ತಾಯ 16:18.] ಒಬ್ಬ ವ್ಯಕ್ತಿ ಕಟ್ಟುವದಾದರೆ, ಅವನು ಏನಾಗಿರುವನು? ಅವನು ಕಟ್ಟುವವನಾಗಿರುವನಲ್ಲವೇ? ಸಭೆಗೆ ಯೇಸುವು *ಏನಾಗಿರುತ್ತಾನೆ?* [ಖಾಲಿಯಾದ ಸ್ಥಳದಲ್ಲಿ "ಕಟ್ಟುವವನು" ಎಂದು ತುಂಬಿರಿ. *ಹಿಂಬದಿಯಲ್ಲಿ* ಚೌಕದ ಎಡಗಡೆಯಲ್ಲಿ "ಕಟ್ಟುವವನು" ಎಂದು ಬರೆಯಿರಿ ಮತ್ತು ಅದರ ಕೆಳಗೆ "ಯೇಸು" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.]

ಯೇಸುವು ಕಟ್ಟುವವನು ಮಾತ್ರವೇ ಅಲ್ಲ ಸಭೆಗೆ ಬೇರೆಯದೂ ಆಗಿದ್ದಾನೆ. ಯಾರ ಮೇಲೆ ಸಭೆಯು ಕಟ್ಟಲ್ಪಟ್ಟಿದೆ? [ಓದಿರಿ 1 ಕೊರಿಂಥ 3:11.] ಯೇಸುವು ಸಭೆಗೆ *ಮತ್ತೇನು* ಆಗಿದ್ದಾನೆ? [ಖಾಲಿಯಾದ ಸ್ಥಳದಲ್ಲಿ "ಅಸ್ತಿವಾರ" ಎಂದು ತುಂಬಿರಿ.] ಯೇಸು ತನ್ನ ಮೇಲೆ ಸಭೆಯನ್ನು ಕಟ್ಟಿದ್ದರೆ, ಬೇರೊಬ್ಬರ ಮೇಲೆ, ಯೇಸುವನ್ನು ಬಿಟ್ಟು ಬೇರೊಬ್ಬರ ಮೇಲೆ ಕಟ್ಟುವುದು ನಮಗೆ ಸರಿಯಾಗಿರುವುದೋ? [*ಹಿಂಬದಿಯಲ್ಲಿ* ಚೌಕದ ಕೆಳಗೆ "ಅಸ್ತಿವಾರ" ಎಂದು ಮತ್ತು ಅದರ ಕೆಳಗೆ "ಯೇಸು" ಎಂದು ಬರೆಯಿರಿ. ಪುಟ ---ನ್ನು ನೋಡಿರಿ.]

ಯೇಸು ಸಭೆಗೆ ಇನ್ನೂ ಬೇರೆಯದಾಗಿದ್ದಾನೆ. ಸಭೆಗೆ ಆತನು ಇನ್ನೂ ಏನಾಗಿದ್ದಾನೆ? [ಓದಿರಿ ಎಫೆಸ 1:22.] ಸಭೆಗೆ ಯೇಸುವು *ಏನಾಗಿದ್ದಾನೆ?* [ಖಾಲಿಯಾದ ಸ್ಥಳದಲ್ಲಿ "ಶಿರಸ್ಸು" ಎಂದು ಬರೆಯಿರಿ.] ಯಾವುದೇ ಸಂಘಟನೆಯ ದೇಹಕ್ಕೆ *ಶಿರಸ್ಸಿನ* ಯಾವ ಕಾರ್ಯವಿರುವುದು? ಸಂಸ್ಥೆಯನ್ನು ನಡಿಸುವುದು ಮತ್ತು ನಿರ್ದೇಶಿಸುವುದು ಶಿರಸ್ಸು ಅಲ್ಲವೇ? ಯಾವುದೇ ಮನುಷ್ಯನು ಇಲ್ಲವೇ ಜನರಗುಂಪು ಸಭೆಯ ಶಿರಸ್ಸಾಗಿರಲಾರದು, ಯೇಸುವು ಬೈಬಲಿನಲ್ಲಿ ಹೇಳಿದ ಸಭೆಯ ಒಂದೇ ಒಂದು ಶಿರಸ್ಸಾಗಿದ್ದಾನೆ. [*ಹಿಂಬದಿಯಲ್ಲಿ* ಚೌಕದ ಮೇಲೆ "ಶಿರಸ್ಸು" ಎಂದು ಬರೆಯಿರಿ, ಮತ್ತು ಕೆಳಗೆ "ಯೇಸು" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.]

ಯೇಸುವು ಸಭೆಗೆ ಬೇರೆಯದೂ ಆಗಿದ್ದಾನೆ. ಆತನು ಸಭೆಗೆ ಇನ್ನೂ ಏನು ಆಗಿದ್ದಾನೆ? [ಓದಿರಿ ಎಫೆಸ 5:23.] ಯೇಸುವು ಸಭೆಗೆ *ಏನು* ಆಗಿದ್ದಾನೆ? [ಖಾಲಿಯಾದ ಸ್ಥಳದಲ್ಲಿ "ರಕ್ಷಕ" ಎಂದು ತುಂಬಿರಿ.] ಯೇಸುವು ತನ್ನ ಮೇಲೆ ಕಟ್ಟಿದ, ಅದರ ಮೇಲೆ ತಾನು ಶಿರಸ್ಸಾಗಿರುವನು, ಯೇಸುವಿನ ಸಭೆಯಲ್ಲಿ ಇರುವವರಿಗೆ ಆತನು ಅವರ ರಕ್ಷಕನಾಗಿರುವನು. [*ಹಿಂಬದಿಯಲ್ಲಿ* ಚೌಕದಿಂದ ಪರಲೋಕದವರೆಗೆ ಒಂದು ಬಾಣವನ್ನು ಮತ್ತು ಬಾಣದಲ್ಲಿ ಒಂದು ಶಿಲುಬೆಯನ್ನು ಗುರುತಿಸಿರಿ. ಶಿಲುಬೆಯ ಕೆಳಗೆ "ರಕ್ಷಕ" ಎಂದು ಮತ್ತು ಅದರ ಕೆಳಗೆ "ಯೇಸು" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡೆವು? ಯೇಸುವು ಸಭೆಯನ್ನು ಕಟ್ಟುವವನು, ಸಭೆಯ ಅಸ್ತಿವಾರವು, ಶಿರಸ್ಸು ಮತ್ತು ರಕ್ಷಕನು ಆಗಿದ್ದಾನೆಂದು ಕಲಿತುಕೊಂಡಿದ್ದೇವೆ. ಯೇಸುವು ಈ ರೀತಿಗಳಲ್ಲಿ ಸಭೆಗೆ ಸಂಬಂಧಿಸಿದಂತೆ, ಜನರು

ಆತನ ಸಭೆಗೆ ತನ್ನನ್ನು ಸಂಬಂಧಿಸಿಕೊಳ್ಳುವಂತೆ ಆತನನ್ನು ಗೌರವಿಸಬೇಕು ಮತ್ತು ಸಭೆಗೆ ಆತನ ಸಂಬಂಧವನ್ನು ಆತನಿಂದ ತೆಗೆದು ಕೊಳ್ಳಲು ಪ್ರಯತ್ನಿಸಬಾರದು. ಜನರು ಬೇರೆ ಸಭೆಗಳನ್ನು ಕಟ್ಟಬಾರದು, ಇತರ ಅಸ್ತಿವಾರಗಳನ್ನು ಹಾಕಲು ಪ್ರಯತ್ನಿಸಬಾರದು, ಇತರ ಶಿರಸ್ಸುಗಳಿಗೆ ವಿಧೇಯರಾಗಬಾರದು, ಮತ್ತು ಇತರ ರಕ್ಷಕನನ್ನು ಹುಡುಕಬಾರದು. ಯೇಸುವು ಸಭೆಗೆ ಅಗತ್ಯವಾಗಿರುವ ಎಲ್ಲವೂ ಆಗಿದ್ದಾನೆ (ಕೊಲೊಸ್ಸೆ 2:10).

## V. ಸಭೆಗಾಗಿ ಯೇಸುವಿನ ಮರಣ

ಯೇಸುವು ಕಟ್ಟುವವನೂ, ಅಸ್ತಿವಾರವೂ, ಶಿರಸ್ಸೂ, ಮತ್ತು ಸಭೆಯ ರಕ್ಷಕನೂ ಆಗಿರುವದಲ್ಲದೇ ಆತನು ಸಭೆಗಾಗಿ ಏನು ಮಾಡಿದ್ದಾನೆ ಮತ್ತು ಯಾಕೆ ಮಾಡಿದ್ದಾನೆ? [ಓದಿರಿ ಎಫೆಸ 5:25.] ಯೇಸುವು ಸಭೆಗಾಗಿ *ಏನು* ಕೊಟ್ಟಿದ್ದಾನೆ ಮತ್ತು *ಯಾಕೆ* ಕೊಟ್ಟಿದ್ದಾನೆ? [ಖಾಲಿಯಾದ ಸ್ಥಳದಲ್ಲಿ "ಅದಕ್ಕಾಗಿ ತನ್ನನ್ನೇ ಕೊಟ್ಟಿದ್ದಾನೆ?" ಮತ್ತು "ಪ್ರೀತಿ" ಎಂದು ತುಂಬಿರಿ.] ಇದು ಇನ್ನೊಂದು ರೀತಿಯಲ್ಲಿ ವ್ಯಕ್ತಪಡಿಸಲ್ಪಟ್ಟಿದೆ. [ಓದಿರಿ ಅಪೊಸ್ತಲರ ಕೃತ್ಯಗಳು 20:28.] ಯೇಸುವು ಸಭೆಯನ್ನು *ಯಾವುದರಿಂದ* ಕೊಂಡುಕೊಂಡನು? [ಖಾಲಿಯಾದ ಸ್ಥಳದಲ್ಲಿ "ತನ್ನ ಸ್ವಂತ ರಕ್ತದಿಂದ ಕೊಂಡುಕೊಂಡನು" ಎಂದು ತುಂಬಿರಿ.]

[ಈ ಸಮಯದಲ್ಲಿ ಶಿಕ್ಷಕನು *ಹಿಂಬದಿಯಲ್ಲಿ* ಅಪೊಸ್ತಲರ ಕೃತ್ಯಗಳು 20:28 ಮತ್ತು ಈ ಕೆಳಗಿನ ಪ್ರಶ್ನೆಗಳನ್ನು ಬರೆಯ ಬೇಕು:

1. ಸಭೆಯನ್ನು ಯಾರು ಕೊಂಡುಕೊಂಡರು?
2. ಸಭೆಯು ಯಾರಿಗೆ ಒಳಪಟ್ಟಿರುತ್ತದೆ?
3. ಸಭೆಯು ಆತನಿಗೆ ಯಾಕೆ ಒಳಪಟ್ಟಿರುತ್ತದೆ?
4. ಆತನು ಅದಕ್ಕಾಗಿ ಏನನ್ನು ಕೊಟ್ಟನು?
5. ನಾವು ಸಭೆಯನ್ನು ಏನೆಂದು ಕರೆಯಬೇಕು?
6. ಸಭೆಯ ಲೆಕ್ಕಿಸಲ್ಪಟ್ಟ ಮೌಲ್ಯ ಯಾವುದು?
7. ಸಭೆಗಾಗಿ ಯೇಸುವು ಏನನ್ನು ಕೊಡಲು ಸಿದ್ಧನಾಗಿದ್ದನು?
8. ಸಭೆಯು ಯೇಸುವಿಗೆ ಬೆಲೆಯುಳ್ಳದ್ದಾಗಿರುವುದೋ?
9. ಯೇಸುವಿನ ರಕ್ತದಿಂದ ಲಾಭ ಪಡೆಯುವದಕ್ಕೆ ಒಬ್ಬನು ಎಲ್ಲಿರತಕ್ಕದ್ದು?
10. ಯೇಸುವು ಪರಲೋಕಕ್ಕೆ ತನ್ನೊಂದಿಗೆ ಯಾರನ್ನು ತೆಗೆದುಕೊಂಡು ಹೋಗುವನು?

ಪ್ರಶ್ನೆಗಳನ್ನು ಬರೆದ ನಂತರ, ಶಿಕ್ಷಕನು ಕಲಿಯುವವನು ಅಪೊಸ್ತಲರ ಕೃತ್ಯಗಳು 20:28ರಿಂದ ಉತ್ತರಕೊಡಲು ಸಹಾಯ ಮಾಡುವನು. ಉತ್ತರಗಳು ಸ್ಪಷ್ಟವಾಗಿರುವವು ಮತ್ತು ಈ ಕೆಳಗಿನಂತಿರುವವು: 1 ಯೇಸು; 2. ಯೇಸು; 3. ಆತನು ಅದನ್ನು ಕೊಂಡುಕೊಂಡನು; 4. ಆತನ ರಕ್ತ; 5. ಆತನ (ಕ್ರಿಸ್ತನ) ಸಭೆ; 6. ಯೇಸುವಿನ ರಕ್ತ; 7. ಆತನ ರಕ್ತ; 8. ಹೌದು; 9. ಆತನ ಸಭೆಯಲ್ಲಿ; 10. ಆತನ ಸಭೆ.

ಪ್ರಶ್ನೆ 10ಕ್ಕೆ ಉದಾಹರಿಸಲು, ಶಿಕ್ಷಕನು, ಒಬ್ಬ ವ್ಯಕ್ತಿಯು ಕಿರಾಣಿ ಅಂಗಡಿಯಲ್ಲಿ ವಸ್ತುಗಳನ್ನು ಕೊಂಡುಕೊಂಡು ಒಂದು ಚೀಲದಲ್ಲಿ ಕಟ್ಟಿ, ಸರಕುಗಳ ಕೋಣೇಯಲ್ಲಿ ಇಟ್ಟು, ಬೇರೆ ಕಡೆಗೆ ತನ್ನ ಕೆಲಸ ಮಾಡಿಕೊಂಡು ಬರಲು ಹೋದದ್ದರ ಬಗ್ಗೆ ಹೇಳಬಹುದು. ಅವನು ಹಿಂದಿರುಗಿ ಅಂಗಡಿಗೆ ಬಂದಾಗ ಕೋಣೆಯಲ್ಲಿ ತನ್ನ ಬ್ಯಾಗಿನ ಜೊತೆಯಲ್ಲಿ ಅನೇಕ ಬ್ಯಾಗುಗುಗಳಿರುವದನ್ನು ನೋಡಿದನು, ಅವನು ತನ್ನೊಂದಿಗೆ ಯಾವ ಚೀ

ಲವನ್ನು ತೆಗೆದುಕೊಂಡು ಹೋಗುವನು? ತಾನು ಕೊಂಡುಕೊಂಡಂಥ ಬ್ಯಾಗನ್ನು ತೆಗೆದು ತೆಗೆದುಕೊಂಡು ಹೋಗುವನು. ಅವನು ಇತರ ಯಾವುದೇ ಬ್ಯಾಗುಗಳನ್ನು ತೆಗೆದುಕೊಂಡರೆ, ಅವನಿಗೆ ಒಳಪಡದ ಬ್ಯಾಗನ್ನು ತೆಗೆದುಕೊಳ್ಳುವವನಾಗುವನು. ಅದೇ ರೀತಿಯಲ್ಲಿ, ಯೇಸುವು ತಾನು ಕೊಂಡು ಕೊಂಡವರನ್ನು *ಮಾತ್ರವೇ* ಪರಲೋಕಕ್ಕೆ ತೆಗೆದುಕೊಂಡು ಹೋಗುವನು. ತನ್ನ ರಕ್ತದಿಂದ ಕೊಂಡುಕೊಳ್ಳಲ್ಪಡದವರನ್ನು ಆತನು ಪರಲೋಕಕ್ಕೆ ತೆಗೆದುಕೊಂಡು ಹೋಗಬೇಕೆಂದಿದ್ದರೆ, ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸುವದರ ಅಗತ್ಯತೆಯನ್ನು ಮೌಲ್ಯವಿಲ್ಲದ್ದನ್ನಾಗಿ ಮಾಡುವನು; ಯಾಕಂದರೆ ಆತನು ತನ್ನ ರಕ್ತದಿಂದ ಕೊಂಡುಕೊಳ್ಳದೇ ಇರುವವರನ್ನು ಪರಲೋಕಕ್ಕೆ ಅವನು ಒಯ್ಯುವದಾದರೆ, ಪರಲೋಕದೊಳಗೆ ಅವರ ಪ್ರವೇಶಕ್ಕಾಗಿ ಆತನ ರಕ್ತದ ಅವಶ್ಯಕತೆಯಿರುವದಿಲ್ಲ. ಸಭೆಯು ಯೇಸುವು ತನ್ನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟವರಾಗಿರುತ್ತಾರೆ; ಆದುದರಿಂದ, ಸಭೆಯು ಪರಲೋಕಕ್ಕೆ ಆತನು ತೆಗೆದುಕೊಂಡು ಹೋಗುವವರಾಗಿರತಕ್ಕದ್ದು. ನೀನು ಆತನ ಸಭೆಯಲ್ಲಿ ಇರುವಿಯೋ?]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ತನ್ನ ಪ್ರೀತಿಯ ಕಾರಣದಿಂದ ಯೇಸುವು ಸಭೆಗಾಗಿ ತನ್ನ ರಕ್ತವನ್ನು ಸುರಿಸಿದನು ಎಂಬುದನ್ನು ನಾವು ಕಲಿತುಕೊಂಡಿದ್ದೇವೆ, ಯೇಸುವಿನ ರಕ್ತದ ಲಾಭಗಳನ್ನು ನಾವು ಬಯಸಿದರೆ, ನಾವು ಆತನ ಸಭೆಯಲ್ಲಿ ಇರತಕ್ಕದ್ದು.

## VI. ಅಧೀನವಾಗುವ ಸಭೆ

ಯೇಸುವು ಕಟ್ಟಿದ ಸಭೆಯು ಯಾರಿಗೆ ವಿಧೇಯವಾಗುವುದು? ಆತನ ಸಭೆಯು ಧಾರ್ಮಿಕ ನಿರ್ದೇಶನಗಳಿಗೆ ನಿಯಮಾವಳಿಗಳಿಗೆ ಮತ್ತು ಜನರ ಸಾಂಪ್ರದಾಯಗಳಿಗೆ ಅಧೀನವಾಗುವುದೋ? [ಓದಿರಿ ಎಫೆಸ 5:24.] ಸಭೆಯು *ಯಾರಿಗೆ* ಅಧೀನವಾಗುತ್ತದೆ? [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತ" ಎಂದು ತುಂಬಿರಿ.]

ಯೇಸುವು ಸಭೆಯ ಶಿರಸ್ಸಾಗಿದ್ದರೆ, ಮತ್ತು ಸಭೆಯು ಆತನಿಗೆ ಅಧೀನವಾಗುವದಾದರೆ, ಸಭೆಗಳು ತಮ್ಮ ಸ್ವಂತ ನಿಯಮಗಳನ್ನೂ ಕ್ರಮಗಳನ್ನೂ ಮಾಡಿಕೊಳ್ಳುವುದು ಸರಿಯಾಗಿರುವುದೋ? ಕ್ರಿಸ್ತನ ಸಭೆಯಲ್ಲಿರುವವರು ಪ್ರತಿಯೊಂದರಲ್ಲಿ ಆತನಿಗೆ ವಿಧೇಯರಾಗಿರತಕ್ಕದ್ದು. ಆತನನ್ನು ಕೇಳದವರು ಜನರಿಂದ ಹೊರಗೆ ಹಾಕಲ್ಪಡುವರು (ಅಪೊಸ್ತಲರ ಕೃತ್ಯಗಳು 3:23).

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿರುವೆವು? ಸಭೆಯು, ಕ್ರಿಸ್ತನ ದೇಹವು ಕ್ರಿಸ್ತನ ಚಿತ್ತವನ್ನು ಮಾಡುತ್ತದೆ ಎಂದು ನಾವು ಕಲಿತುಕೊಂಡಿದ್ದೇವೆ.

## VII. ಸಾಮರಸ್ಯ

1. ಯೇಸುವಿನೊಂದಿಗೆ ಜನರ ಒಂದೇ ದೇಹ, ಸಭೆ ಇರುವುದೆಂದು ನಾವು ಆಗಲೇ ಕಲಿತುಕೊಂಡಿದ್ದೇವೆ. ಈ ಒಂದೇ ದೇಹದ ಸದಸ್ಯರಲ್ಲಿ ಒಬ್ಬರನ್ನೊಬ್ಬರಿಗೆ ಯಾವ ರೀತಿಯ ಸಂಬಂಧವನ್ನು ಯೇಸುವು ಬಯಸುತ್ತಾನೆ? ಅವರು ಒಬ್ಬರಿಗೊಬ್ಬರು ವಿರೋಧಿಸುವವರಾಗಿರಬೇಕೆಂದು ಬಯಸುತ್ತಾನೋ ಇಲ್ಲವೇ ಅವರು ಐಕ್ಯವಾಗಿರಬೇಕೆಂದು ಬಯಸುತ್ತಾನೋ? [ಓದಿರಿ ಯೋಹಾನ 17:22.] ಯೇಸು ಮತ್ತು ತಂದೆಯು ಒಬ್ಬರಿಗೊಬ್ಬರು ಸಾಮರಸ್ಯದಲ್ಲಿ ಕಾರ್ಯಮಾಡುತ್ತಾರೆ. ಯೇಸುವು ತನ್ನ ಅನುಯಾಯಿಗಳು ಅವರನ್ನು ಒಂದು ಮಾದರಿಯಂತೆ ಅನುಸರಿಸಬೇಕೆಂದು ಬಯಸುವನೋ? [ಖಾಲಿಯಾದ ಸ್ಥಳದಲ್ಲಿ "ಒಂದು" ಎಂದು ತುಂಬಿರಿ.] ತಾನು ಮತ್ತು

ತಂದೆಯೂ ಒಂದಾಗಿರುವಂತೆ ತನ್ನ ಹಿಂಬಾಲಕರೂ ಒಂದಾಗಿ ಐಕ್ಯವಾಗಿರಬೇಕೆಂದು ಯೇಸುವು ಬಯಸುತ್ತಾನೆ.

2. ಅವರು ಹೇಗೆ ಜೀವಿಸಬೇಕೆಂದು ಯೇಸುವು ಬಯಸಿದ್ದನೋ ಅದೇ ರೀತಿಯಲ್ಲಿ ಅವರು ಜೀವಿಸಬೇಕೆಂದು ಪ್ರೋತ್ಸಾಹಿಸಲು ಪೌಲನು ಕೊರಿಂಥದವರಿಗೆ ಬರೆದನು, ಅವರಿಗೆ ಕೆಲವು ಆಂತರಿಕ ಹೋರಾಟಗಳಿದ್ದವು. ಅವರು *ಏನು* ಮಾಡಬೇಕೆಂದು ಪೌಲನು ಕೇಳಿದನು? [ಓದಿರಿ 1 ಕೊರಿಂಥ 1:10.] ಅವರು ಏನು ಮಾಡಬೇಕಾಗಿತ್ತು? [ಖಾಲಿಯಾದ ಸ್ಥಳದಲ್ಲಿ "ಅದನ್ನೇ" ಮತ್ತು "ವಿಭಜನೆಗಳು" ಎಂದು ತುಂಬಿರಿ. ಬೈಬಲಿನ ಕೆಲವು ಆವೃತ್ತಿಗಳಲ್ಲಿಯ ಪದಗಳ ಉಪಯೋಗದ ಕಾರಣದಿಂದ, ಶಿಕ್ಷಕನು ಅಧ್ಯಯನ ಪ್ರಶ್ನಾವಳಿಯಲ್ಲಿಯ ಪದಗಳನ್ನು ಸ್ವಲ್ಪ ಬದಲಾವಣೆ ಮಾಡಬಹುದು.] ಅವರು ಮಧ್ಯದಲ್ಲಿದ್ದ ವಿಭಜನೆಯು ಸರಿಯಾದದ್ದಾಗಿರುವವರುವದಿಲ್ಲ ಮತ್ತು ಅದು ಸರಿಪಡಿಸಲ್ಪಡಬೇಕು.

3. ಫಿಲಿಪ್ಪಿಯ ಸಹೋದರಿಗೆ ಪೌಲನು ಯಾವ ನಿರ್ದೇಶನವನ್ನು ಕೊಟ್ಟನು? [ಓದಿರಿ ಫಿಲಿಪ್ಪಿ 1:27.] ಅವರು ವಿಶ್ವಾಸಕ್ಕಾಗಿ ಶ್ರಮೆಪಟ್ಟಂತೆ *ಯಾವ* ಮನೋ ಭಾವನೆಯನ್ನು ಅವನು ಅಪೇಕ್ಷಿಸಿದನು? [ಖಾಲಿಯಾದ ಸ್ಥಳದಲ್ಲಿ "ಒಂದು" ಮತ್ತು "ಒಂದಾಗಿ" ಎಂದು ತುಂಬಿರಿ.] ಅಲ್ಲಿ ಎಷ್ಟು ವಿಶ್ವಾಸಗಳು ಇದ್ದವು? ಅಲ್ಲಿ ಒಂದೇ ಒಂದು ವಿಶ್ವಾಸವಿರುತ್ತದೆ (ಎಫೆಸ 4:5).

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಯೇಸುವಿನ ಅನುಯಾಯಿಗಳು, ಆತನ ಸಭೆಯು, ಐಕ್ಯತೆಯುಳ್ಳದ್ದಾಗಿರಬೇಕೆಂದು ಕಲಿತು ಕೊಂಡಿದ್ದೇವೇ. ಒಂದೇ ಮನಸ್ಸಿನೊಂದಿಗೆ, ವಿಭಜನೆಗಳಿಲ್ಲದೇ ಅವರು ಒಂದಾಗಿ ಸಾಮರಸ್ಯದಲ್ಲಿ ಕಾರ್ಯಮಾಡಬೇಕು.

ಯೇಸುವು ಒಂದೇ ಒಂದು ಸಭೆಯನ್ನು ಕಟ್ಟಿದ್ದರೆ ಮತ್ತು ಸಭೆಯ ಮೇಲೆ ಶಿರಸ್ಸಾಗಿ ವಿಶ್ವಾಸಿಗಳ ತನ್ನ ದೇಹದ ಮಧ್ಯದಲ್ಲಿ ಐಕ್ಯತೆಯನ್ನು ಅಪೇಕ್ಷಿಸಿದರೆ, ಯಾಕೆ ಅನೇಕ ಸಭೆಗಳು ಇರುತ್ತವೆ? ಇದು ಅನೇಕರು ಕೇಳುವ ಪ್ರಶ್ನೆಯಾಗಿದೆ. ಪ್ರಶ್ನೆಯು ಅಷ್ಟು ಸುಲಭವಾದದ್ದಾಗಿರಲಿಕ್ಕಿಲ್ಲ, ಆದರೆ ಅಂಥದ್ದು ಸಂಭವಿಸುತ್ತದೆಂಬುದನ್ನು ಬೈಬಲ್ ಸೂಚಿಸುತ್ತದೆ.

ಎಫೆಸದ ಸಭೆಯ ಹಿರಿಯರಿಗೆ ಅಪೊಸ್ತಲ ಪೌಲನು ಏನು ಹೇಳಿದನೆಂಬುದನ್ನು ಗಮನಿಸಿರಿ. (ಓದಿರಿ ಅಪೊಸ್ತಲರ ಕೃತ್ಯಗಳು 20:17, 28-31.) ಸಭೆಗೆ ಏನು ಸಂಭವಿಸಲಿಕ್ಕಿತ್ತು? ಜನರು ಕೆಡಿಸಲ್ಪಟ್ಟ ಬೋಧನೆಯನ್ನು ಪ್ರಸಂಗಿಸಲಿಲ್ಲವೇ ಮತ್ತು ಹಾಗೆ ಮಾಡುವದರಿಂದ ತಮ್ಮ ಸ್ವಂತ ಹಿಂಬಾಲಕರನ್ನು ಕೂಡಿಸಿಕೊಳ್ಳಲಿಲ್ಲವೇ? [*ಹಿಂಬದಿಯಲ್ಲಿ* ಸಭೆಯನ್ನು ಪ್ರತಿನಿಧೀಕರಿಸುವ ಚೌಕದಿಂದ ಜಗತ್ತಿನಲ್ಲಿಯ ಹಿಂದಿನ ಚಿಕ್ಕ ಚೌಕದ ವರೆಗೆ ಒಂದು ಬಾಣವನ್ನು ಚಿತ್ರಿಸಿರಿ. ಬಾಣದಲ್ಲಿ "ಶಿಷ್ಯರು" ಎಂದು ಮತ್ತು ಹೊಸ ಚೌಕದ *ಮೇಲೆ, ಅದರ ಪಕ್ಕದಲ್ಲಿ, ಅದರ ಕೆಳಗೆ,* ಮತ್ತು ಅದರಲ್ಲಿ "ಜನರು" ಎಂದು ಬರೆಯಿರಿ. ಪುಟ 166ನ್ನು ನೋಡಿರಿ.]

ಮನುಷ್ಯರು ಪ್ರಾರಂಭಿಸಿದ ಸಭೆಗಳಿಗೆ ಅವುಗಳ ಮೇಲೆ *ಮನುಷ್ಯರು* ಶಿರಸ್ಸಿನಂತಿದ್ದಾರೆ ಮತ್ತು *ಮನುಷ್ಯರ* ಬೋಧನೆಗಳ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟಿವೆ ಎಂಬುದನ್ನು ಗಮನಿಸಿರಿ. ಇವುಗಳು ಯೇಸುವು ಕಟ್ಟಿದ, ಸಭೆಯೊಂದಿಗೆ, ಯೇಸುವು ಶಿರಸ್ಸಾಗಿರುವ, ಅಸ್ತಿವಾರವಾಗಿರುವ ಮತ್ತು ರಕ್ಷಕನಾಗಿರುವ ಸಭೆಯೊಂದಿಗೆ ಸ್ಪರ್ಧೆಯಲ್ಲಿವೆ.

ಯೇಸುವು ತನ್ನ ಸಭೆಗಾಗಿ ಮರಣಹೊಂದಿದನು ಮತ್ತು ತನ್ನ ಸಭೆಯ

ರಕ್ಷಕನಾಗಿರುವನು. ಜನರು ಪ್ರಾರಂಭಿಸಿರುವ ಸಭೆಗಳಿಗಾಗಿ ಯಾರು ಮರಣ ಹೊಂದಿದರು ಮತ್ತು ಈ ಸಭೆಗಳ ರಕ್ಷಕನು ಯಾರು? ಮನುಷ್ಯರ ಸಭೆಗಳಿಗೆ ತಪ್ಪಾದ ಕಟ್ಟುವವನೂ ಅಸ್ತಿವಾರವೂ ಮತ್ತು ಶಿರಸ್ಸೂ ಇರುತ್ತದೆ. ಇದರಲ್ಲಿ ಅವರು ಯೇಸುವು ಕಟ್ಟಿದ ಸಭೆಗಿಂತ ಭಿನ್ನವಾಗಿದ್ದರೆ, ಕ್ರಿಸ್ತನ ಸಭೆಯ ರಕ್ಷಕನಂತೆ ಅವುಗಳಿಗೆ ಒಬ್ಬ ರಕ್ಷಕನು ಇರುವ ಸಾಧ್ಯತೆ ಇದೆಯೋ?

ಎಲ್ಲಾ ಜನರೂ ಜಗತ್ತನ್ನು ಮತ್ತು ಜನರಿಂದ ಪ್ರಾರಂಭಿಸಲ್ಪಟ್ಟ ಸಭೆಗಳನ್ನು ಬಿಟ್ಟು ಕ್ರಿಸ್ತನಲ್ಲಿ, ಯೇಸುವು ಕಟ್ಟಿದ ಸಭೆಯಲ್ಲಿ ಐಕ್ಯತೆ ಹೊಂದಬೇಕು. ಇದೊಂದೇ ಸುರಕ್ಷಿತವಾದ ಮಾರ್ಗವಾಗಿರುವುದು. ಜನರು ತಮ್ಮ ಸಭೆಗಳನ್ನು ರಕ್ಷಿಸಿಕೊಳ್ಳಲಾರರು ಆದರೆ ಯೇಸುವು ತನ್ನ ಸಭೆಯನ್ನು ರಕ್ಷಿಸಬಲ್ಲನು. ನೀನು ಕ್ರಿಸ್ತನ ಸಭೆಯ ಸದಸ್ಯನಾಗಿರುವಿಯೋ? ನೀನು ಸದಸ್ಯನಾಗಿರದಿದ್ದರೆ, ಈಗ ಯಾಕೆ ಆಗಬಾರದು ಮತ್ತು ಆತನನ್ನು ನಿನ್ನ ರಕ್ಷಕನನ್ನಾಗಿ ಯಾಕೆ ತೆಗೆದುಕೊಳ್ಳಬಾರದು.

## VIII. ಸಭೆಯ ಅಂತಿಮಸ್ಥಿತಿ

ಯೇಸುವಿನ ಪ್ರೀತಿಯು ಆತನನ್ನು ತನ್ನ ಸಭೆಗಾಗಿ ಸಾಯುವದಕ್ಕೆ ಪ್ರೋತ್ಸಾಹಿಸಿತು (ಎಫೆಸ 5:25). ಆದರೆ ಅಂಥ ರೀತಿಯಲ್ಲಿ ಯೇಸುವು ತನ್ನನ್ನು ಯಾಕೆ ಕೊಟ್ಟನು? ಅಪೊಸ್ತಲ ಪೌಲನಿಂದ ಎರಡು ಕಾರಣಗಳು ಕೊಡಲ್ಪಟ್ಟಿವೆ. [ಓದಿರಿ ಎಫೆಸ 5:26, 27.] ಇವುಗಳಲ್ಲಿ ಮೊದಲನೆಯ ಕಾರಣವು ಎಫೆಸ 5:26ರಲ್ಲಿ ಕೊಡಲ್ಪಟ್ಟಿದೆ. ತಾನು *ಏನು* ಮಾಡಲಿಕ್ಕಾಗುವಂತೆ ಯೇಸುವು ತನ್ನನ್ನು ಕೊಟ್ಟನು? [ಖಾಲಿಯಾದ ಸ್ಥಳದಲ್ಲಿ "ಪರಿಶುದ್ಧಗೊಳಿಸಲು," "ಶುದ್ಧೀಕರಿಸಲು," ಮತ್ತು "ಒಪ್ಪಿಸಿಕೊಡಲು," ಎಂದು ತುಂಬಿರಿ.]

"ಪರಿಶುದ್ಧಗೊಳಿಸು" ಎಂಬ ಪದವು ಬಹಳ ಸಲ ಉಪಯೋಗಿಸಲ್ಪಟ್ಟಿರುವದಿಲ್ಲ. ಅದರ ಅರ್ಥವೇನು? ಒಂದು ವಿಶೇಷವಾದ ಉದ್ದೇಶಕ್ಕಾಗಿ ಪ್ರತ್ಯೇಕವಾಗಿಡು ಎಂದು ಅದರ ಅರ್ಥ. ಒಂದು ಬಟ್ಟೆಯ ತುಂಡು ವಿವಿಧ ಉದ್ದೇಶಗಳಿಗಾಗಿ ಉಪಯೋಗಿ ಸಲ್ಪಡಬಹುದು: ಅದರಿಂದ ನೆಲವನ್ನು ತಿಕ್ಕಬಹುದು, ಮೂಗನ್ನು ಒರಸಿಕೊಳ್ಳಬಹುದು, ಪಾತ್ರೆಗಳನ್ನು ಒರಸಬಹುದು ಇತ್ಯಾದಿ. ಒಂದು ಬಟ್ಟೆಯ ತುಂಡಿನ ಮೇಲೆ ದೇಶದ ಧ್ವಜವು ಮುದ್ರಿಸಲ್ಪಟ್ಟರೆ, ಅದು ಸಾಧಾರಣವಾದ ಉದ್ದೇಶಗಳಿಂದ ಪ್ರತ್ಯೇಕಿಸಲ್ಪಟ್ಟು, ಒಂದು ಧ್ವಜದಂತೆ ಉಪಯೋಗಿಸಲ್ಪಡುವುದು. ಯೇಸುವು ತನ್ನ ಸಭೆಯನ್ನು "ಪರಿಶುದ್ಧ ಗೊಳಿಸಲು" ಅಂದರೆ ಅದು ತನ್ನ ಪರಲೋಕದ ಉದ್ದೇಶಗಳನ್ನು ಸಾಧಿಸಲಿಕ್ಕಾಗುವಂತೆ ತನ್ನ ಜನರನ್ನು ದುಷ್ಟ ಜಗತ್ತಿನಿಂದ ಬೇರೆಯಾಗಿಡಲು, ಮರಣ ಹೊಂದಿದನು.

ಸಭೆಯನ್ನು "ಶುದ್ಧೀಕರಿಸುವದಕ್ಕಾಗಿ" ಆತನು ಮರಣ ಹೊಂದಿದನು. ಅಶುದ್ಧವಾದ, ಹೊಲೆಯಾದ ಇಲ್ಲವೇ ಕೆಟ್ಟುಹೋದ ಯಾವುದೂ ಪರಲೋಕವನ್ನು ಪ್ರವೇಶಿಸಲಾರದು (ಪ್ರಕಟನೆ 21:27). ಅದು ಸ್ವಚ್ಛವಾಗಿರುವದಕ್ಕಷ್ಟೇ ಅಲ್ಲ, ಆದರೆ ಆತನು ಅದನ್ನು ಪರಲೋಕಕ್ಕೆ ತೆಗೆದುಕೊಂಡು ಹೋಲಿಕ್ಕಾಗುವಂತೆ ಯೇಸುವು ಸಭೆಯನ್ನು ಸ್ವಚ್ಛವಾ ದದ್ದನ್ನಾಗಿಯೂ ಕಳಂಕವಿಲ್ಲದ್ದನ್ನಾಗಿಯೂ ಮಾಡುವದಕ್ಕಾಗಿ ತನ್ನ ಪ್ರಾಣಕೊಟ್ಟನು. ಒಂದೇ ದೇಹವು *ಕ್ರಿಸ್ತನಲ್ಲಿ* ಇರುತ್ತದೆ, ಅಲ್ಲಿ ಅದು ಯೇಸುವಿನ ರಕ್ತದಿಂದ ಶುದ್ಧೀಕರಿ ಸಲ್ಪಡುತ್ತದೆ; ಆ ರಕ್ತವು ಸಭೆಯನ್ನು ಕೊಂಡುಕೊಂಡಿದೆ (ರೋಮಾಪುರ 12:5; ಎಫೆಸ 1:7; ಅಪೊಸ್ತಲರ ಕೃತ್ಯಗಳು 20:28).

ವಾಕ್ಯದಿಂದ ನೀರಿನ ತೊಳೆಯುವಿಕೆಯೊಂದಿಗೆ ಸಭೆಯನ್ನು ಆತನು ಶುದ್ಧೀಕ ರಿಸಲಿಕ್ಕಾಗುವಂತೆ ಯೇಸುವು ತನ್ನನ್ನೇ ಕೊಟ್ಟನು ಎಂಬುದನ್ನು ಗಮನಿಸಿರಿ. *ನೀರಿ*

*ನಲ್ಲಾಗಲೀ* ಇಲ್ಲವೇ *ವಾಕ್ಯದಲ್ಲಾಗಲೀ* ನಮ್ಮ ಪಾಪಗಳನ್ನು ಶುದ್ಧೀಕರಿಸಲಿಕ್ಕೆ ತನ್ನಲ್ಲಿ ತಾನೇ ಬಲವಿರುವದಿಲ್ಲ. *ವಾಕ್ಯದಿಂದ ನೀರಿನ* ತೊಳೆಯುವಿಕೆಯೊಂದಿಗೆ ಆತನು ಶುದ್ಧೀಕರಿಸಲಿಕ್ಕಾಗುವಂತೆ ಯೇಸುವು ತನ್ನನ್ನೇ ಕೊಟ್ಟನು.

ಬ್ಯಾಂಕಿನಲ್ಲಿ ಹಣವಿಲ್ಲದಿದ್ದಿರೆ ಚೆಕ್ಕಿಗೆ ಬೆಲೆ ಇರುವದಿಲ್ಲ. ಬ್ಯಾಂಕಿನಲ್ಲಿರುವ ಹಣವು ಚೆಕ್ಕಿಗೆ ಬೆಲೆಯನ್ನು ಕೊಡುತ್ತದೆ. ಅದೇ ರೀತಿಯಲ್ಲಿ, ಯೇಸುವಿನ ರಕ್ತವು ನೀರಿನಿಂದ ಮತ್ತು ವಾಕ್ಯದಿಂದ ಶುದ್ಧೀಕರಣವನ್ನು ಸಾಧ್ಯವಾಗಿ ಮಾಡುತ್ತದೆ. ಜನರು ಕೇಳುವಂತೆ, ಕಲಿಯುವಂತೆ ಮತ್ತು ಯೇಸುವಿನಲ್ಲಿ ನಂಬಿಕೆಯಿಡುವಂತೆ (ಯೋಹಾನ 17:20; ಅಪೊಸ್ತಲರ ಕೃತ್ಯಗಳು 17:11, 12), ಮಾನಸಾಂತರ ಪಡುವಂತೆ, ಯೇಸುವಿನಲ್ಲಿ ನಂಬಿಕೆಯನ್ನು ಅರಿಕೆ ಮಾಡುವಂತೆ ಮತ್ತು ಬಾಪ್ತಿಸ್ಮ ಹೊಂದುವಂತೆ ವಾಕ್ಯವು ಅಗತ್ಯವಾದದ್ದಾಗಿದೆ. ವಾಕ್ಯವು ನೀರು ಇಲ್ಲದೆ ನಮ್ಮನ್ನು ಶುದ್ಧೀಕರಿಸಲಾರದು ಮತ್ತು ನೀರು, ವಾಕ್ಯವು ಇಲ್ಲದೆ ನಮ್ಮನ್ನು ಶುದ್ಧೀಕರಿಸಲಾರದು. ನೀರು ಮತ್ತು ವಾಕ್ಯ ಎರಡೂ ಅಗತ್ಯವಾಗಿವೆ. ಎದ್ದು ಹೋಗಿ ಬಾಪ್ತಿಸ್ಮ ಮಾಡಿಸಿಕೊಂಡು ತನ್ನಪಾಪಗಳನ್ನು ತೊಳೆದುಕೊಳ್ಳಬೇಕೆಂದು ಸೌಲನು ಹೇಗೆ ಹೇಳಲ್ಪಟ್ಟನು ಎಂಬುದನ್ನು ಗಮನಿಸಿರಿ (ಅಪೊಸ್ತಲರ ಕೃತ್ಯಗಳು 22:16). ವಾಕ್ಯಕ್ಕೆ ಉತ್ತರಕೊಟ್ಟು (ಅಪೊಸ್ತಲರ ಕೃತ್ಯಗಳು 2:41) ನೀರಿನಲ್ಲಿ ಬಾಪ್ತಿಸ್ಮ ಹೊಂದಿದವರನ್ನು ಆತನು ಶುದ್ಧೀಕರಿಸಲಿಕ್ಕಾಗುವಂತೆ ಯೇಸುವು ತನ್ನನ್ನು ಒಪ್ಪಿಸಿಕೊಟ್ಟನು.

ಯೇಸುವು ತನ್ನನ್ನು ಒಪ್ಪಿಸಿಕೊಟ್ಟದ್ದರ ಎರಡನೆಯ ಉದ್ದೇಶವು ಎಫೆಸ 5:27ರಲ್ಲಿ ಕಂಡು ಬರುತ್ತದೆ. ಕಳಂಕ, ಸುಕ್ಕು, ಹೊಲೆಯಿಲ್ಲದಂಥ ಪರಿಶುದ್ಧ ಸಭೆಯನ್ನು ತನಗೆ ಸಮರ್ಪಿಸಿಕೊಳ್ಳುವದಕ್ಕಾಗಿ ಆತನು ತನ್ನನ್ನೇ ಸಮರ್ಪಿಸಿಕೊಟ್ಟನು.

ಒಬ್ಬ ಐಶ್ವರ್ಯವಂತ ಮನುಷ್ಯನು ಪಟ್ಟಣದ ಕೊಳಚೆ ಪ್ರದೇಶದಲ್ಲಿ ವಾಹನ ನಡಿಸಿಕೊಂಡು ಹೋಗುತ್ತಿದ್ದಾಗ, ಒಬ್ಬ ಮಹಿಳೆಯನ್ನು ನೋಡಿ ಆಕರ್ಷಿತನಾಗುತ್ತಾನೆ. ಆಕೆಯ ಪರಿಚಯ ಮಾಡಿಕೊಂಡು ತರುವಾಯ ಆಕೆಯೊಂದಿಗೆ ಮದುವೆಮಾಡಿ ಕೊಳ್ಳಲು ತನ್ನ ತಾಯಿಯ ಒಪ್ಪಿಗೆ ಪಡೆಯುವದಕ್ಕಾಗಿ ಆಕೆ ತನ್ನ ತಾಯಿಯನ್ನು ಬೇಟಿ ಯಾಗಬೇಕೆಂದು ಬಯಸುತ್ತಾನೆ, ತನ್ನ ಐಶ್ವರ್ಯವಂತ ತಾಯಿ ಈ ಸ್ತ್ರೀಯನ್ನು ಒಪ್ಪಿಕೊಳ್ಳುವಳೋ ಎಂದು ಯೋಚಿಸುತ್ತಾನೆ. ಒಳ್ಳೆಯ ಸ್ವಚ್ಛವಾದ, ಸ್ವೀಕಾರ ಯೋಗ್ಯ ವಾದ ಉಡುಪುಗಳಿಂದ ಆಕೆಯನ್ನು ಸಿದ್ಧಪಡಿಸುತ್ತಾನೆ. ಆಗ ಅವನು ಆಕೆಯನ್ನು ತನ್ನ ತಾಯಿಯ ಬಳಿಗೆ ಕರೆದುಕೊಂಡು ಹೋಗುತ್ತಾನೆ.

ಅದೇ ರೀತಿಯಲ್ಲಿ, ನಮ್ಮ ಪಾಪಭರಿತ ಸ್ಥಿತಿಯಲ್ಲಿ, ತಂದೆಯ ಮನೆಯಲ್ಲಿ ಸ್ಥಳವಿಲ್ಲದವರಾಗಿರುವೆವು. ಯೇಸುವು ಸಭೆಯನ್ನು ಶುದ್ಧೀಕರಿಸಿ, ಅದನ್ನು ತನ್ನಿಂದಲೇ ಹೊದಿಸಿರುವನು (ಗಲಾತ್ಯ 3:27) ಅವರಿಂದ ಅದನ್ನು ಶುದ್ಧವಾದ ಕನ್ನಿಕೆಯಂತೆ ತನಗೆ ಸಮರ್ಪಿಸಿಕೊಳ್ಳುವನು (2 ಕೊರಿಂಥ 11:2). ನೀನು ಕ್ರಿಸ್ತನ ಸಭೆಯಲ್ಲಿ ಇರುವಿಯೋ? ನೀನು ಕ್ರಿಸ್ತನ ಸಭೆಯ ಸದಸ್ಯನಾಗಿ ಯಾಕೆ ಇರಬೇಕು? ಕ್ರಿಸ್ತನ ಸಭೆಯ ಅಂತಿಮ ಸ್ಥಿತಿ ಯಾವುದು.

ಕ್ರಿಸ್ತನ ಸಭೆಯನ್ನು ನೀನು ಹೇಗೆ ಪ್ರವೇಶಿಸುವಿ? ನೀನು ವಾಕ್ಯವನ್ನು ಕೇಳಿ ದ್ದೀಯೋ, ಯೇಸುವಿನಲ್ಲಿ ನಂಬಿದ್ದೀಯೋ, ನಿನ್ನ ಪಾಪಗಳಿಗಾಗಿ ಮಾನಸಾಂತರ ಪಟ್ಟಿರುವಿಯೋ, ಯೇಸುವಿನಲ್ಲಿ ನಿನ್ನ ನಂಬಿಕೆಯನ್ನು ಅರಿಕೆ ಮಾಡಿರುವಿಯೋ ಮತ್ತು ಬಾಪ್ತಿಸ್ಮ ಹೊಂದಿರುವಿಯೋ? ಯೇಸುವಿನ ಚಿತ್ತಕ್ಕೆ ನಿನ್ನ ಪ್ರತಿಕ್ರಿಯೆಯಲ್ಲಿ ಯಾವುದು ಕೊರತೆಯಾಗಿದೆ. ನೀನು ಈಗಲೇ ಯಾಕೆ ವಿಧೇಯನಾಗಬಾರದು?

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಕಳಂಕವೂ ದೋಷವೂ

ಇಲ್ಲದ ಸಭೆಯಂತೆ ಸಭೆಯನ್ನು ತನಗೆ ಸಮರ್ಪಿಸಿಕೊಳ್ಳಲು ತನ್ನ ಮರಣ ಮುಖಾಂತರ ಯೇಸುವು ಅದನ್ನು ಪರಿಶುದ್ಧಗೊಳಿಸಿ, ಶುದ್ಧೀಕರಿಸಲು ಆತನ ಪ್ರೀತಿಯು ಪ್ರೇರೇಪಿಸಿತೆಂದು ಕಲಿತುಕೊಂಡಿದ್ದೇವೆ.

**ಸಾರಾಂಶ**

ಯೇಸುವಿಗೆ, ಆತನ ಸಭೆಗೆ ಒಳಪಟ್ಟ ಜನರ ಬಗ್ಗೆ ಈ ಪಾಠದಲ್ಲಿ ನಾವು ಅಧ್ಯಯನ ಮಾಡಿದ್ದೇವೆ.

I. *ಕ್ರಿಸ್ತನ ಸಭೆಯನ್ನು ಯಾರು ಮಾಡುತ್ತಾರೆ?* ಸಭೆ, ಕ್ರಿಸ್ತನ ದೇಹವು ಆತನ ಹಿಂಬಾಲಕರಾದ, ಆತನ ಶಿಷ್ಯರಾದ, ಕ್ರೈಸ್ತರೆಂದು ಕರೆಯಲ್ಪಟ್ಟ ಪುರುಷರಿಂದಲೂ ಸ್ತ್ರೀಯರಿಂದಲೂ ಮಾಡಲ್ಪಟ್ಟಿರುತ್ತದೆ.

II. *ಎಷ್ಟು ದೇಹಗಳು?* ಒಂದೇ ಒಂದು ದೇಹವಿರುವುದು.

III. *ಅದು ಯಾರ ಸಭೆ (ದೇಹ) ಆಗಿರುವುದು?* ಕ್ರೈಸ್ತರ ದೇಹವು ಯೇಸುವಿಗೆ ಒಳಪಟ್ಟಿರುವುದು.

IV. *ಕ್ರಿಸ್ತನು ಸಭೆಗೆ ಏನಾಗಿದ್ದಾನೆ?* ಕ್ರಿಸ್ತನು ಕಟ್ಟುವವನು, ಅಸ್ತಿವಾರವು, ಶಿರಸ್ಸು ಮತ್ತು ರಕ್ಷಕನು ಆಗಿದ್ದಾನೆ.

V. *ಕ್ರಿಸ್ತನು ಸಭೆಗಾಗಿ ಏನನ್ನು ಮಾಡಿದ್ದಾನೆ?* ತನ್ನ ರಕ್ತದಿಂದ ಸಭೆಯನ್ನು ಕೊಂಡುಕೊಳ್ಳುವದಕ್ಕಾಗಿ ಯೇಸುವು ತನ್ನನ್ನೇ ಒಪ್ಪಿಸಿಕೊಟ್ಟನು.

VI. *ಸಭೆಯು ಕ್ರಿಸ್ತನಿಗೆ ಅಧೀನವಾಗಿರುತ್ತದೆ.*

VII. *ಕ್ರಿಸ್ತನು ತನ್ನ ಸದಸ್ಯರಲ್ಲಿ ಯಾವ ರೀತಿಯ ಸಾಮರಸ್ಯತೆಯನ್ನು ಅಪೇಕ್ಷಿಸುತ್ತಾನೆ?* ಆತನಿಗೆ ತಂದೆಯೊಂದಿಗೆ ಇರುವ ಸಾಮರಸ್ಯತೆಯನ್ನು ಆತನು ಬಯಸುತ್ತಾನೆ, ಯಾಕಂದರೆ "ನಾವು ಒಂದಾಗಿರುವಂತೆ" ಆತನ ಹಿಂಬಾಲಕರೂ ಒಂದಾಗಿರಬೇಕೆಂದು ಆತನು ಪ್ರಾರ್ಥಿಸಿದನು.

VIII. *ಸಭೆಯನ್ನು ತನಗೆ ಸಮರ್ಪಿಸಿಕೊಳ್ಳಲಿಕ್ಕಾಗುವಂತೆ, ಅದನ್ನು ಪರಿಶುದ್ಧ ಮಾಡಲು, ವಾಕ್ಯದಿಂದ ನೀರಿನ ತೊಳೆಯುವಿಕೆಯೊಂದಿಗೆ ಅದನ್ನು ಶುದ್ಧೀಕರಿಸಲು ಯೇಸುವು ಸಭೆಗಾಗಿ ತನ್ನನ್ನು ಒಪ್ಪಿಸಿಕೊಟ್ಟನು.*

ಒಬ್ಬನು ಕ್ರೈಸ್ತನಾಗುವದರಲ್ಲಿ ವಿಶ್ವಾಸಿಗಳ ಯೇಸುವಿನ ದೇಹದ ಸದಸ್ಯನಾಗುವನು ಅಂದರೆ ಆತನ ಸಭೆಯ ಸದಸ್ಯನು ಆಗುವನೆಂದು ನಾವು ಈ ಪಾಠದಲ್ಲಿ ಕಲಿತುಕೊಂಡಿದ್ದೇವೆ. ಯೇಸುವಿಗೆ ಅಂಥ ಒಂದೇ ದೇಹವಿರುತ್ತದೆ ಮತ್ತು ಬೈಬಲಿನಲ್ಲಿ ಬೋಧಿಸಿದಂಥ ಒಂದು ಬಾಪ್ತಿಸ್ಮವನ್ನು ನಾವು ಹೊಂದುವಾಗ ಆ ದೇಹದಲ್ಲಿ ಪ್ರವೇಶಿಸುತ್ತವೆ ಆತನ ದೇಹದ ಸದಸ್ಯನಾಗಿ, ಆತನು ಕಟ್ಟುವವನಾಗಿರುವ, ಒಂದೇ ಅಸ್ತಿವಾರವಾಗಿರುವ, ಮತ್ತು ಅದರ ಶಿರಸ್ಸು ಮತ್ತು ರಕ್ಷಕನೂ ಆಗಿರುವಾತನು ಸಭೆಯ ಸದಸ್ಯರಾಗಿರುತ್ತೇವೆ. ಜನರ ಸಭೆಗಳ ಸದಸ್ಯರಾಗುವದರ ಬದಲು ನಾವೆಲ್ಲರೂ ಈ ಸಭೆಯ ಸದಸ್ಯರಾಗಿರತಕ್ಕದ್ದು. ತನ್ನ ಸಭೆಯಾಗಿರುವ ಯೇಸುವಿನ ಪ್ರೀತಿಯು ಆತನು ಸಹಿಸಿದ ಮರಣದಲ್ಲಿ ಕಂಡು ಬರುತ್ತದೆ; ಸಭೆಯನ್ನು ಕಳಂಕವೂ ದೋಷವೂ ಇಲ್ಲದ್ದನ್ನಾಗಿ ತನಗೆ ಸಮರ್ಪಿಸಿಕೊಳ್ಳಲು ಅದನ್ನು ಆತನು ಪರಿಶುದ್ಧಗೊಳಿಸಿದನು ಮತ್ತು ಶುದ್ಧೀಕರಿಸಿದನು. ಆತನು ತನ್ನ ಎಲ್ಲಾ ಅನುಯಾಯಿಗಳಲ್ಲಿ ಐಕ್ಯತೆಯನ್ನು ಬಯಸುತ್ತಾನೆ.

ನೀನು ಕ್ರಿಸ್ತನ ಸಭೆಯ ಸದಸ್ಯನಾಗಿರುವಿಯೋ? ನೀನು ಆತನ ಸಭೆಯ ಸದಸ್ಯನು ಯಾಕೆ ಆಗಿರಬೇಕೆಂಬುದನ್ನು ತಿಳಿದಿರುವಿಯೋ? ಯೇಸುವು ತನಗೆ

ಸಮರ್ಪಿಸಿಕೊಳ್ಳುವ ವಿಶ್ವಾಸಿಗಳ ಆ ದೇಹದ ಸದಸ್ಯನು ನೀನಾಗುವಂತೆ, ಈಗಲೇ ನೀನು ಯೇಸುವಿನ ಹಿಂಬಾಲಕನು, ಕ್ರೈಸ್ತನು ಆಗಬಾರದೇಕೆ? ಈಗ ಹಿಂಬಾಲಕನಾಗಲು ಬಯಸುವಿಯೋ?

[ಮುಂದಿನ ಅಧ್ಯಯನಕ್ಕಾಗಿ ಸಮಯದ ವ್ಯವಸ್ಥೆ ಮಾಡಿರಿ.]

© 2009 Truth for Today